**ಸ್ಪೆಷಲ್ ಕೇಸ್ ನಂ. 102/2022 ಪಿಡಬ್ಲ್ಯೂ.1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 30.09.2024**

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

4. 2 ನೇ ಆರೋಪಿ ಮನೆ ಕಟ್ಟುವ ಸಮಯದಲ್ಲಿ ಮೇಸ್ತ್ರಿ ಆದಂತಹ ಮಹಮದ್ ಅಲಿ ರವರು ಪಾಂಡವಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿ. ನಾನು ದೂರು ಕೊಟ್ಟ ನಂತರ ಮಹಮದ್ ಅಲಿ ಬಾಡಿಗೆ ಮನೆಯನ್ನು ಖಾಲಿ ಮಾಡಿಕೊಂಡು ಹೋಗಿದ್ದರು ಎಂದರೆ ಗೊತ್ತಿಲ್ಲ. ನಾನು ದೂರು ಕೊಡುವವರೆವಿಗೂ ನಾನು ಹಾಗೂ ಮೇಸ್ತ್ರಿ ರವರುಗಳು ಸಂಪರ್ಕದಲ್ಲಿದ್ದೆವು ಎಂದರೆ ಸರಿ. ದೂರು ಕೊಟ್ಟ ನಂತರ ನಮ್ಮ ನಡುವೆ ಸಂಪರ್ಕ ಕಡಿದುಹೋಗಿತ್ತು ಎಂದರೆ ಸರಿ. ಸದರಿಯವರು ಈಗ ಎಲ್ಲಿ ಇದ್ದಾರೆಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ.

5. ನಾನು 2 ನೇ ಆರೋಪಿ ಮನೆ ಕಟ್ಟುವ ಕೆಲಸಕ್ಕೆ ಹೋಗುವವರೆಗೂ ನನಗೆ ಆರೋಪಿತರ ಪರಿಚಯ ಇರಲಿಲ್ಲ ಎಂದರೆ ಸರಿ. ನನ್ನ ಹಾಗೂ ಸದರಿಯವರುಗಳ ಪೋನು ನಂಬರುಗಳು ಇಬ್ಬರಿಗೂ ಇರಲಿಲ್ಲ ಎಂದರೆ ಸರಿ. ನಾನು ಸದರಿಯವರ ಮನೆಗೆ ಕೆಲಸಕ್ಕೆ ಹೋಗುವ ಪೂರ್ವದಲ್ಲಿ ನಾನು ಹಾಗೂ 2 ನೇ ಆರೋಪಿ ಯಾವತ್ತೂ ಪೋನಿನಲ್ಲಿ ಮಾತನಾಡಿರಲಿಲ್ಲ. 2 ನೇ ಆರೋಪಿ ಹೊಸದಾಗಿ ಕಟ್ಟಿರುವ ಮನೆ ತೂಬಿನಕರೆ ಪಾಂಡವಪುರ ರಸ್ತೆಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಸದರಿ ಮನೆಯ ಸುತ್ತು ಮುತ್ತ ರಸ್ತೆ ಹಾಗೂ ಜಮೀನುಗಳು ಇವೆ ಎಂದರೆ ಸರಿ. ಅಲ್ಲಿ ಯಾವುದೇ ವಾಸದ ಮನೆಗಳು ಇಲ್ಲ ಎಂದರೆ ಸರಿ.

6. ಪ್ಲೋರೀಗ್ ಕೆಲಸಕ್ಕೆ ಯಂತ್ರ ಇರಲಿಲ್ಲ ಅದರ ಬದಲು ಕೂಲಿಕಾರರಿಂದ ಕೆಲಸ ಮಾಡಿಸುತ್ತಿದ್ದೆ ಎಂದರೆ ಸರಿ. ಕೆಲಸಕ್ಕೆ ಬರುವ ಪೂರ್ವದಲ್ಲಿ ನನ್ನ ಹಾಗೂ ಮಹಮದ್ ಅಲಿ ನಡುವೆ ಮಾತುಕತೆ ಆಗಿತ್ತು ಆದರೆ ಆರೋಪಿತರೊಂದಿಗೆ ಮಾತುಕತೆ ಆಗಿರಲಿಲ್ಲ ಎಂದರೆ ಸರಿ.

7. ಘಟನಾ ಸ್ಥಳದಲ್ಲಿ ಬೆಳಗ್ಗೆ 7.00 ರಿಂದ ಸಂಜೆ 5.00 ಗಂಟೆವರೆಗೆ ಇದ್ದೆ. ಆಗ ನನ್ನನ್ನು, ಮೇಸ್ತ್ರಿ ಇವರನ್ನು ಹೊರತುಪಡಿಸಿ ಮನೆಯವರು ಸುಮಾರು 4 ಜನರು ಇದ್ದರು. ಮನೆಯವರು ಕೂಲಿಕಾರರಿಗೆ ಬೆಳಗ್ಗೆ ಮಾತ್ರ ತಿಂಡಿ ವ್ಯವಸ್ಥೆ ಮಾಡುತ್ತಿದ್ದರು. ಘಟನೆಯಾಗಿ ಮರುದಿವಸ ದೂರನ್ನು ನಾನು ಮುನಿಸಿಪಾಲಿಟಿ ಹತ್ತಿರ ಟೈಪಿಂಗ್ ಸೆಂಟರ್ ನಲ್ಲಿ ಟೈಪ್ ಮಾಡಿಸಿದ್ದೆ. 2 ನೇ ಆರೋಪಿ ಹಾಗೂ ಮಹಮದ್ ಅಲಿ ನಡುವೆ ಯಾವ ಷರತ್ತಿನ ಅಡಿಯಲ್ಲಿ ಕಟ್ಟಡದ ಕೆಲಸ ಕರಾರು ಆಗಿತ್ತು ಎಂದು ನನಗೆ ಮಾಹಿತಿ ಇಲ್ಲ.

8. ದಿನಾಂಕ 25.01.2022 ರಂದು ನನಗೆ ಮಹಮದ್ ಅಲಿ ರವರಿಂದ ಹಣ ತೆಗೆದುಕೊಳ್ಳುವಂತೆ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಅವರ ಫೋನು ಸ್ವಿಚ್ ಆಪ್ ಆಗಿದೆ ನೀವೇ ಹಣ ಕೊಡಿ ಎಂದು 2 ನೇ ಆರೋಪಿಗೆ ನಾನು ಒತ್ತಾಯಿಸಿದ್ದೆ ಎಂದರೆ ಸರಿಯಲ್ಲ. ಅವರು ನಿರಾಕರಿಸಿದಾಗ ನಾನು ಹಾಗೂ ನನ್ನ ಮನೆಯವರು ಸೇರಿ ಕಟ್ಟಡದ ಕಾಂಕ್ರೀಟ್ ಅನ್ನು ಹೊಡೆದು ಹಾಕಲು ಪ್ರಯತ್ನಿಸಿದಾಗ ಅವರು ನಮ್ಮನ್ನು ತಡೆದಿದ್ದರು ಎಂದರೆ ಸರಿಯಲ್ಲ.

9. ಸರ್ಕಾರದಿಂದ ರೂ.50,000/- ಹಣ ಪಡೆಯಲು ಏನೇನು ನಷ್ಟ ಆಗಿರುತ್ತದೆ ಎಂಬ ಬಗ್ಗೆ ದಾಖಲೆಯನ್ನು ನಾನು ಕೊಟ್ಟಿರುವುದಿಲ್ಲ. ಈ ಸಂಬಂಧ ತನಿಖಾಧಿಕಾರಿಗೆ ನಾನು ನಷ್ಟ ಉಂಟು ಆದ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ. ಯಾವ ಯಾವ ನಷ್ಟ ಉಂಟು ಆಗಿದೆ ಎಂದು ಸರ್ಕಾರದಿಂದ ಹಣ ಪಡೆದಿದ್ದೇನೆ ಎಂಬ ಬಗ್ಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಸಾಕ್ಷಿದಾರರ ಹೆಸರುಗಳನ್ನು ತನಿಖಾಧಿಕಾರಿಗೆ ಹೇಳಿದ್ದೇನೆ. ನಾನು ಠಾಣೆಗೆ ಹೋದಾಗ ಸಂಜೆ 5.30 ರಿಂದ 6.00 ಗಂಟೆ ಸಮಯ ಆಗಿತ್ತು. ಪೊಲೀಸ್ ಪೇದೆಯನ್ನು ನನ್ನೊಂದಿಗೆ ಕಳುಸಿಕೊಟ್ಟರು. ಅವರ ವಾಹನದಲ್ಲಿ ನನನ್ನು ಕರೆದುಕೊಂಡು ಹೋದರು. ಘಟನಾ ಸ್ಥಳದಲ್ಲಿ ಸದರಿ ಪೊಲೀಸರು ನನ್ನನ್ನು ವಾಪಸ್ ಕಳುಹಿಸಿಕೊಡುವವರೆಗೂ ಇದ್ದರು. ಸದರಿ ವಿಚಾರ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಸ್ಪತ್ರೆಗೆ ಹೋದಾಗ ಆರೋಪಿತರು ಅಲ್ಲಿಗೆ ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

10. ಆರೋಪಿತರ ಸಂಬಂಧ ಹಾಗೂ ಅವರ ಹಿನ್ನೆಲೆ ಬಗ್ಗೆ ದೂರು ಕೊಡುವಾಗ ಮನೆಯ ಮಾಲೀಕರಾದ 2 ನೇ ಆರೋಪಿ ಮಾಹಿತಿಯನ್ನು ಕೊಟ್ಟಿದ್ದರು. ಸದರಿ ವಿಷಯ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

11. ಠಾಣೆಯಲ್ಲಿ ಎಷ್ಟು ದಾಖಲೆಗಳಿಗೆ ಸಹಿ ಮಾಡಿದ್ದೇನೆಂದು ಜ್ಞಾಪನಕಿಲ್ಲ. ನಿಪಿ.1 ಎ ಸಹಿಯನ್ನು ನಾನು ಠಾಣೆಯಲ್ಲಿ ಮಾಡಿದ್ದೆ. ನಿಪಿ.2 ಎ ಸಹಿಯನ್ನು ಸ್ಥಳದಲ್ಲಿ ಮಹಜರ್ ಸಮಯದಲ್ಲಿ ಮಾಡಿದ್ದೇನೆ. ನಿಪಿ.3 ಎ ಸಹಿಯನ್ನು ಮನೆ ಕಟ್ಟುವ ಸ್ಥಳದಲ್ಲಿ ಮಾಡಿದ್ದೇನೆ. ನಿಪಿ.2 ಹಾಗೂ 3 ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ.2 ದಾಖಲೆಯನ್ನು ಸ್ಥಳದಲ್ಲಿ ಬರೆಯಲಾಗಿತ್ತು. ಆರೋಪಿತರು ನನ್ನನ್ನು ತಡೆ ಹಿಡಿದು, ಹಲ್ಲೆ ಮಾಡಿಲ್ಲ, ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. 2 ಹಾಗೂ 3 ನೇ ಆರೋಪಿತರು ನನ್ನನ್ನು ತಬ್ಬಿ ಹಿಡಿದು ಪೋನು ಕಿತ್ತು ಕೊಂಡಿಲ್ಲ, ನಷ್ಟ ಉಂಟು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ಪರಿಹಾರದ ಹಣ ಪಡೆದುಕೊಳ್ಳುವ ದುರುದ್ದೇಶದಿಂದ ನಿಪಿ.1 ಅನ್ನು ಪೊಲೀಸರಿಗೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

12. ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಕೆಲಸ ಮಾಡಬೇಕು ಎಷ್ಟು ಹಣ ಕೊಡಬೇಕು ಎಂಬ ಬಗ್ಗೆ ನೇರವಾಗಿ ನನ್ನ ಹಾಗೂ 2 ನೇ ಆರೋಪಿ ನಡುವೆ ಮಾತುಕತೆ ಆಗಿರಲಿಲ್ಲ ಎಂದರೆ ಸರಿ, ಮಾಲೀಕರಿಂದ ತಿಳಿದುಕೊಂಡಿದ್ದೆ. ಈ ಬಗ್ಗೆ ಮಹಮದ್ ಅಲಿ ರವರಿಂದ ತಿಳಿದುಕೊಂಡಿಲ್ಲ ಎಂದರೆ ಪೋನು ಮಾಡಿದರೂ ತೆಗೆಯುತ್ತಿಲ್ಲ. ನನ್ನ ದೂರಿನಲ್ಲಿ ಯಾವುದೇ ನೈಜತೆ ಇಲ್ಲ ಎಂದು ಪೊಲೀಸರು ದೂರನ್ನು ತೆಗೆದುಕೊಳ್ಳಲು ನಿರಾಕರಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಸಂಘಟನೆಗಳಿಂದ ಹಾಗೂ ರಾಜಕಾರಣಿಗಳ ಪ್ರಭಾವ ಬೀರಿ ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೇ ಯಾವುದೇ ಘಟನೆ ನಡೆದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ.1 ರಿಂದ 5 ಅನ್ನು ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪೋನಿಗೆ ಸಂಬಂಧಪಟ್ಟಂತೆ ರಶೀದಿ ಹಾಜರುಪಡಿಸಿಲ್ಲ ಎಂದರೆ ಅದು ಸಿಕ್ಕಿಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.